# ಸರ್ಪಸುತ್ತು ಎಂಬ ಆಪತ್ತು




ಮೊದಲಿಗೆ ಸರ್ಪಸುತ್ತಿನಲ್ಲಿ ಚರ್ಮದಲ್ಲಿ ನೋವುಯುಕ್ತವಾದ ಕೆಂಪು ಗುಳ್ಳೆಗಳು ಕಾಣಿಸುತ್ತವೆ. ವಿಶೇಷವಾಗಿ ದೇಹದ ಅಥವಾ ಮುಖದ ಒಂದು ಭಾಗದಲ್ಲಿ ಮಾತ್ರ ಆರಂಭದಲ್ಲಿ ಕಾಣಿಸುತ್ತದೆ. ಇದು ಪಟ್ಟಿಯ ಹಾಗೆ ಬೆಳೆಯುತ್ತದೆ. ಇರುವೆ ಓಡಾಡಿದ ಹಾಗೆ, ತುರಿಕೆ, ಉರಿ, ನೋವುಗಳು ಉಂಟಾಗುತ್ತದೆ.

**■ ಡಾ. ಸುದರ್ಶನ ಕೆ. ಆಚಾರ್**

ಸರ್ಪಸುತ್ತು ಎಂಬುದು ಸಾಮಾನ್ಯ ಚರ್ಮದ ಸಮಸ್ಯೆಯಾದರೂ ಇದು ನೀಡುವ ಯಾತನೆ, ಎಂತವರಿಗೂ ನಡುಕ ಹುಟ್ಟಿಸುವುದು ಸಹಜ. ಗ್ರಾಮೀಣ ಪ್ರದೇಶದ ಮನೆ ಮನೆಗಳಲ್ಲಿ ಸಾಮಾನ್ಯವಾದ ಇದರ ಚರ್ಚೆ ಹಲವಾರು ತಪ್ಪು ಗ್ರಹಿಕೆ ಇದರ ಬಗ್ಗೆ ಹುಟ್ಟುವಂತೆ ಮಾಡಿದೆ. ಮೊದಲಿಗೆ ಸಣ್ಣ ಚರ್ಮದ ಸಮಸ್ಯೆಯಿಂದ ಪ್ರಾರಂಭವಾಗುವ ಇದು ನಿರ್ಲಕ್ಷಿಸಿದಂತೆಲ್ಲಾ ಬಹುದೊಡ್ಡ ಉಪದ್ರವಗಳನ್ನು ತಂದೊಡ್ಡುತ್ತದೆ.

ಪ್ರಪಂಚದಲ್ಲಿ 1000ಕ್ಕೆ ಹತ್ತರಿಂದ ಇಪ್ಪತ್ತು ಜನರಿಗೆ ಸರ್ಪಸುತ್ತಿನ ತೊಂದರೆ ಸಾಮಾನ್ಯ. ಹೆಚ್ಚಾಗಿ ವಯಸ್ಕರಲ್ಲಿ ಕಂಡುಬರುತ್ತದೆ. ಒಬ್ಬರಿಂದ ಒಬ್ಬರಿಗೆ ಹರಡಬಲ್ಲ ಸಾಂಕ್ರಾಮಿಕ ಕಾಯಿಲೆ ಇದು. ಸರ್ಪಸುತ್ತನ್ನು ಆಂಗ್ಲಭಾಷೆಯಲ್ಲಿ ಹರ್ಪಿಸ್ ಹಾಗೂ ಶಿಂಗಲ್ ಎಂದು ಕರೆಯುತ್ತಾರೆ. ಸರ್ಪಸುತ್ತು 'ವೆರಿಸುಲ್ಲಾ ಜೋಸ್ಟರ್' ಎಂಬ ವೈರಾಣುವಿನಿಂದ ಹರಡುತ್ತದೆ. ಇದೇ ರೋಗಾಣುವೇ ಮನುಷ್ಯನಲ್ಲಿ ಚಿಕನ್‌ಪಾಕ್ಸ್ ಎಂಬ ರೋಗವನ್ನು ತರುತ್ತದೆ. ಈ ರೋಗಾಣುವು ನರಮಂಡಲಗಳಲ್ಲಿ ಬದುಕುತ್ತವೆ.



ಮೊದಲಿಗೆ ಚರ್ಮದಲ್ಲಿ ನೋವುಯುಕ್ತವಾದ ಕೆಂಪು ಗುಳ್ಳೆಗಳು ಕಾಣಿಸುತ್ತವೆ. ವಿಶೇಷವಾಗಿ ದೇಹದ ಅಥವಾ ಮುಖದ ಒಂದು ಭಾಗದಲ್ಲಿ ಮಾತ್ರ ಕಾಣಿಸುತ್ತದೆ. ಇದು ಪಟ್ಟಿಯ ಹಾಗೆ ಬೆಳೆಯುತ್ತದೆ. ಇರುವೆ ಓಡಾಡಿದ ಹಾಗೆ, ತುರಿಕೆ, ಉರಿ, ನೋವು ಕಾಣಿಸುತ್ತದೆ. ನರಮಂಡಲಗಳು ಹಬ್ಬಿದ ಜಾಗದಲ್ಲೇ ಹಬ್ಬುತ್ತಾ ಹೋಗುತ್ತದೆ. ಈ ಸಂದರ್ಭದಲ್ಲಿ ತಲೆನೋವು, ಮೈಕೈ ನೋವು, ಜ್ವರ ಬಂದಂತಹ ಅನುಭವ ಕೆಲವರಲ್ಲಿ ಕಾಣಿಸುತ್ತದೆ.

ರೋಗ ಹೆಚ್ಚಾದಂತೆಲ್ಲ ಚರ್ಮದಲ್ಲಿ ನೀರು ತುಂಬಿದ ಗುಳ್ಳೆಗಳು ಹುಟ್ಟುತ್ತಾ ಹೋಗುತ್ತವೆ, ನಂತರ ಕೀವು ಉಂಟಾಗುತ್ತದೆ. ರಕ್ತ ಕೂಡ ಹೊರಬರುವ ಸಾಧ್ಯತೆ ಹೆಚ್ಚು. ಹೀಗೆ ಅವು ಮೂರರಿಂದ ನಾಲ್ಕು ವಾರಗಳಲ್ಲಿ ಒಣಗುತ್ತವೆ. ಪೂರ್ತಿಯಾಗಿ ಗುಣವಾಗದ ಸರ್ಪಸುತ್ತಿನಲ್ಲಿ ನರಮಂಡಲಗಳಲ್ಲಿ ನೋವು ಬಹುಕಾಲದವರೆಗೂ ಉಳಿದು ಬಿಡುತ್ತದೆ. ಇದನ್ನು ಪೋಸ್ಟ್ ಹರ್ಪಾಟಿಕ್ ನ್ಯೂರಲ್ಜಿಯಾ ಎಂದು ಕರೆಯುತ್ತಾರೆ. ಕಣ್ಣಿನ ಭಾಗದಲ್ಲಿ ಉಂಟಾದರೆ ದೃಷ್ಟಿಹಾನಿ, ಕಿವಿಯ ಭಾಗದಲ್ಲಿ ಆದರೆ ಕಿವುಡುತನ, ಹಲ್ಲುಗಳ ಹಾಗೂ ವಸಡುಗಳ ಹಾನಿ ಉಂಟಾಗುತ್ತದೆ. ಮುಂದೆ ಇದು ಹರಡಿದರೆ ಮೆದುಳು, ಲಿವರ್ ಮುಂತಾದ ಅಂಗಗಳನ್ನು ನಾಶಪಡಿಸುವ ಸಾಧ್ಯತೆ ಇರುತ್ತದೆ. ರಕ್ತನಾಳಗಳಲ್ಲಿ ಹರಡಿದಾಗ ಅವು ಕೊಳೆತು ರಕ್ತಸಂಚಲನದಲ್ಲಿ ಹಾನಿ ಉಂಟು ಮಾಡಬಲ್ಲದು. ಹಲವು ದಿನಗಳ ಕಾಲ ನರಮಂಡಲಗಳಲ್ಲಿ ಉಳಿದಾಗ ನರಮಂಡಲಗಳ ನ್ಯೂನತೆಯೊಂದಿಗೆ ತೊಂದರೆ ಶಾಶ್ವತ ಅಂಗ ಊನತ್ವವನ್ನು ತರುತ್ತದೆ. ಈ ವೈರಾಣುಗಳು ಹಾಳು ಮಾಡಿದ ಜಾಗದಲ್ಲಿ ಬಾಕ್ಟೀರಿಯಾಗಳು ತಮ್ಮ ಕೆಲಸವನ್ನು ಮಾಡಲು ಸಹಕಾರಿಯಾಗಿದೆ.

ದೇಹದ ರೋಗ ನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ಇದು ಹೆಚ್ಚಾಗಿ ಕಾಣಸಿಗುತ್ತದೆ. ಆಯುರ್ವೇದ ಶಾಸ್ತ್ರದಲ್ಲಿ ಬಹಳ ಹಿಂದೆಯೇ ಇದನ್ನು ಮಸೂರಿಕ, ವಿಸ್ಫೋಟ ಮತ್ತು ವಿಸರ್ಪ ರೋಗಗಳೆಂದು ಗುರುತಿಸಿ ಅದರ ಗುಣಲಕ್ಷಣಗಳ ಬಗ್ಗೆ ಮಾಹಿತಿ ಇದೆ.

ವಮನ, ವಿರೇಚನ, ರಕ್ತಮೋಕ್ಷಣಗಳೆಂಬ ಪಂಚಕರ್ಮ ಚಿಕಿತ್ಸೆಗಳೊಂದಿಗೆ, ಹಚ್ಚಲು ಲೇಪಾದಿಗಳು ಹಾಗೂ ಸೇಕಗಳನ್ನು ಉಪಯೋಗಿಸಲಾಗುತ್ತದೆ. ಔಷಧಿಗಳಲ್ಲಿ ಪಟೋಲ, ಅಮೃತಬಳ್ಳಿ, ಸೊಗಡೆ ಬೇರು, ಕಟುಕ ರೋಹಿಣಿ, ಖದಿರ, ಬೇವು, ಪಂಚತಿಕ್ತಕಗಳು, ಮೃದ್ದಾರಶೃಂಗ, ಗೈರಿಕ.. ಹೀಗೆ ಲಕ್ಷಣಕ್ಕೆ ಅನುಗುಣವಾಗಿ ಉಪಯೋಗಿಸಲಾಗುತ್ತದೆ.

ಎಳ್ಳು, ಉದ್ದು, ಹುರುಳಿ, ಅತಿ ಉಪ್ಪು, ಕಾರ, ಮಸಾಲೆ ಹಾಗೂ ಕರಿದ ಆಹಾರಗಳನ್ನು ಈ ಸಂದರ್ಭದಲ್ಲಿ ತ್ಯಜಿಸಬೇಕು. ಹಸಿರುಬೇಳೆ, ಚನ್ನಾ ಮುಂತಾದ ತಂಪು ಬೇಳೆಗಳನ್ನು, ದ್ರಾಕ್ಷಿ, ದಾಳಿಂಬೆಗಳಂತಹ ಹಣ್ಣುಗಳನ್ನು, ಹಾಗಲದಂತಹ ಕಹಿ ತರಕಾರಿಗಳು ಆಹಾರದಲ್ಲಿ ಬಳಸಿದರೆ ರೋಗ ನಿವಾರಣೆ ಸುಲಭ. ಪಥ್ಯಾಹಾರ ಕಟ್ಟುನಿಟ್ಟಾಗಿ ಪಾಲಿಸಬೇಕು. ■